ದಿನಾಂಕ: 15-12-2015

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲು : ಶ್ರೀ ಡಿ ಜೆ ಆರ್ ವಕೀಲರಿಂದ : –

ಜುಲೈ ಮತ್ತು ಆಗಸ್ಟ್ 2006 ರಲ್ಲಿ ತುಮಕೂರು ಜಿಲ್ಲಾ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದೆ ಎಂದರೆ ಸುಳ್ಳು. ನನಗೆ ಯಾವುದೇ ನೋಟೀಸ್ ಬಂದಿಲ್ಲ. ನಾನು ತುಮಕೂರು ಜಿಲ್ಲಾ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದಾಗ ವಾದಿಯ ಗಂಡ , 2 ನೇ ಪ್ರತಿವಾದಿಯ ಕೋರಿಕೆಯ ಮೇರೆಗೆ 15.000 ರೂ.ಗಳನ್ನು ನನಗೆ ಕೊಟ್ಟಿದ್ದಾರೆ ಎಂದರೆ ನಾನು ಆಸ್ಪತ್ರೆಯಲ್ಲೂ ದಾಖಲಾಗಿಲ್ಲ ಹಾಗೂ ಯಾವುದೇ ಹಣ ಪಡೆದಿಲ್ಲ. ಸೆಪ್ಟೆಂಬರ್ 2006 ರ ಮೊದಲ ವಾರದಲ್ಲಿ ಆಸ್ಪತ್ರೆಯಿಂದ ಬಿಡುಗಡೆ ಹೊಂದಿದೆ ಎಂದರೆ ನಾನು ದಾಖಲಾಗಿಯೇ ಇಲ್ಲ ಎಂದು ನುಡದಿರುತ್ತಾರೆ.

ವಾದಿಯು ದಿ : 8-9-2006 ರಂದು ನಮಗೆ ನೊಟೀಸ್ ಕೊಟ್ಟಿದ್ದರು ಎಂದರೆ ಸುಳ್ಳು. ಸದರಿ ನೊಟೀಸನ್ನು ನನ್ನ ಎರಡೂ ವಿಳಾಸಗಳಲ್ಲಿ ಅಂದರೆ ಹೇಮ್‌ದೊರೆ ಮತ್ತು ಪಟ್ಟನಾಯಕನಹಳ್ಳಿ ವಿಳಾಸಕ್ಕೆ ಕಳುಹಿಸಿದ್ದರು ಎಂದರೆ , ಯಾವುದೇ ನೋಟೀಸ್ ಬಂದಿಲ್ಲ, 2 ನೇ ಪ್ರತಿವಾದಿ ಸಹಿ ಮಾಡುತ್ತಾರೆ. ನಾನು ಸಹಿ ಮಾಡುತ್ತೇನೆ. ನಿಪಿ- 10 ಮತ್ತು 11 ನ್ನು ಸಾಕ್ಷಿಗೆ ತೋರಿಸಿ ಅದರಲ್ಲಿರುವ ಸಹಿ 2 ನೇ ಪ್ರತಿವಾದಿಯ ಸಹಿಯೇ ಎಂದರೆ ನನಗೆ ಗೊತ್ತಾಗುವುದಿಲ್ಲ ಎಂದು ನುದಿರುತ್ತಾರೆ. ವಾದಿ ಕಳುಹಿಸಿದ ನೋಟಿಸ್ಸನ್ನು ನನ್ನ ಹೆಬ್ಬಟ್ಟಿನ ರುಜು ಹಾಕುವ ಮೂಲಕ ನೋಟಿಸ್ ತೆಗೆದುಕೊಂಡಿದ್ದೇನೆ ಎಂದರೆ ಸುಳ್ಳು.

ಈ ಪ್ರಕರಣದಲ್ಲಿ ನ್ಯಾ.ದಿಂದ ಸಮನ್ಸ್ ಬಂದಿತ್ತೇ? ಎಂದರೆ ಯಾವುದೂ ಬಂದಿಲ್ಲ. 2 ನೇ ಪ್ರತಿವಾದಿಗೂ ಸಹ ನ್ಯಾ. ದಿಂದ ಯಾವುದೇ ಸಮನ್ಸ್ ಬಂದಿಲ್ಲ ಎಂದರೆ ನಿಜ. ಸಾಕ್ಷಿಗೆ ನ್ಯಾ.ದಿಂದ 2 ನೇ ಪ್ರತಿವಾದಿಗೆ ಕಳುಹಿಸಿದ ಸಮನ್ಸ್ ಜಾರಿಯಾಗಿರುವ ಅಂಚೇ ಸ್ವೀಕೃತಿ ಪತ್ರವನ್ನು ತೋರಿಸಿದ್ದು , ಅದನ್ನು ನಿರಾಕರಿಸಿರುತ್ತಾರೆ. ಈ ಪ್ರಕರಣದಲ್ಲಿ ನಾನು ಹಾಜರಾಗಬೇಕೆಂದು ನನಗೆ ಯಾರೂ ತಿಳಿಸಿಲ್ಲ. ವಾದಿಯು ದಾವೆ ಸಲ್ಲಿಸಿದ್ದು ನಾವು ನ್ಯಾಕ್ಕೆ ಹಾಜರಾಗುವಂತೆ ನಮಗೆ ನ್ಯಾ.ದಿಂದ ಸಮನ್ಸ್ ಬಂದಿಲ್ಲ.

ನ್ಯಾದಿಂದ ಸಮನ್ಸ್ ಬರದಿದ್ದರೂ , ನ್ಯಾಕ್ಕೆ ಹಾಜರಾಗುವಂತೆ ಯಾವುದೇ ವ್ಯಕ್ತಿ ನಿಮಗೆ ತಿಳಿಸದಿದ್ದರೂ ಯಾವ ಆಧಾರದಲ್ಲಿ ಈ ಪ್ರಕರಣದಲ್ಲಿ ಹಾಜರಾಗಬೇಕೆಂದು ನಿಮಗೆ ಗೊತ್ತಾಯಿತು ಎಂಬ ಪ್ರಶ್ನೆಗೆ ಸಾಕ್ಷಿಯು ಯಾವುದೇ ಉತ್ತರ ನೀಡದೆ ಮೌನವಾಗಿ ನಿಂತಿರುತ್ತಾರೆ. ವಾದಿಯು ಈ ದಾವಾ ಸಲ್ಲಿಸಿದ ವಿಚಾರ ನಿಮಗೆ ಯಾವಾಗ ತಿಳಿಯಿತು ಎಂದರೆ ? ಭೀಮಣ್ಣ ( ನನ್ನ ಗಂಡನ ಅಣ್ಣ ) ಸಲ್ಲಿಸಿದ ದಾವೆಯ ಮುಖಾಂತರ ಈ ಪ್ರಕರಣದ ಬಗ್ಗೆ ಗೊತ್ತಾಗಿದೆ. ಈ ದಾವೆಯ ಬಗ್ಗೆ ಭೀಮಣ್ಣ ನನಗೆ ಏನನ್ನೂ ಹೇಳಿಲ್ಲ. ಈ ದಾವೆಯ ವಿಚಾರ ನನಗೆ ಅಥವಾ 2 ನೇ ಪ್ರತಿವಾದಿಗೆ ಗೊತ್ತಿಲ್ಲ. ಭೀಮಣ್ಣನವರು ನಮ್ಮ ವಿರುದ್ದ ನಿಪಿ- 13 ರಂತೆ ದಾವೆ ಸಲ್ಲಿಸಿದ್ದರು ಎಂದರೆ ನಿಜ. ಸದರಿ ದಾವೆಯಲ್ಲಿ ನಾವು ವಕೀಲರನ್ನು ನೇಮಿಸಿಕೊಂಡಿದ್ದೆವು ಎಂದರೆ ನಿಜ. ಸದರಿ ದಾವೆಯಲ್ಲಿ ನಾವು ಹೇಳುವಂತೆ ನಮ್ಮ ವಕೀಲರು ಪ್ರತಿವಾದ ಪತ್ರ ಸಲ್ಲಿಸಿದ್ದಾರೆ ಎಂದರೆ ನಿಜ. ಸದರಿ ದಾವೆಯನ್ನು ಸಲ್ಲಿಸಿದ ಪ್ರತಿವಾದ ಪತ್ರದಲ್ಲಿನ ವಿಷಯವನ್ನು ನಾನು ಮತ್ತು 2 ನೇ ಪ್ರತಿವಾದಿ ದಾಖಲೆಗಳ ಮುಖಾಂತರ ಹೇಳಿ ಬರೆಸಿದ್ದೇವೆ ಎಂದರೆ ಸುಳ್ಳು. ಸದರಿ ಪ್ರತಿವಾದ ಪತ್ರದಲ್ಲಿನ ವಿಷಯಗಳನ್ನು ಹೇಳಿ ಬರೆಸಿದ್ದೀರೋ ಅಥವಾ ಬರೆಸಿರುವ ವಿಷಯಗಳನ್ನು ತಿಳಿದುಕೊಂಡು ಸಹಿ ಮಾಡಿದ್ದೀರೋ ಎಂದರೆ ಜಮೀನು ಕೊಡಲಾಗುವುದಿಲ್ಲವೆಂದು ಬರೆಸಿದ್ದೇವೆ ಎಂದು ನುಡಿದಿರುತ್ತಾರೆ. ನಿಪಿ- 14 ಕ್ಕೆ ನಾವು ಸಹಿ ಮಾಡಿಲ್ಲ ಎಂದರೆ ನಮಗೆ ಗೊತ್ತಾಗುವುದಿಲ್ಲ.

2 ನೇ ಪ್ರತಿವಾದಿ 5 ನೇ ತರಗತಿವರೆಗೆ ವ್ಯಾಸಾಂಗ ಮಾಡಿದ್ದಾರೆ. 2 ನೇ ಪ್ರತಿವಾದಿ ವ್ಯವಸಾಯ ಮಾಡುತ್ತಾರೆ. ನಿಪಿ- 14 ರಲ್ಲಿನ ವಾದಿಗೆ ದಾವಾ ಆಸ್ತಿಯ ಮಾರಾಟದ ಬಗ್ಗೆ ಕರಾರು ಆಗಿದೆ ಎಂದು ಬರೆಸಿಲ್ಲ. ಓಎಸ್ 112/2006 ತೀರ್ಮಾನವಾಗಿದೆ ಎಂದರೆ ನಿಜ. ಸದರಿ ಓಎಸ್ 112/2006 ರಲ್ಲಿನ ಪ್ರತಿವಾದ ಪತ್ರದಲ್ಲಿನ ಕರಿಯಮ್ಮ ಕೋಂ ರಂಗನಾಥಪ್ಪ ಎನ್ನುವ ಹೆಸರನ್ನು ತಿದ್ದುಪಡಿ ಮಾಡಿಕೊಂಡಿಲ್ಲ. ದಾವಾ ಸ್ವತ್ತನ್ನು ವಾದಿಗೆ ಮಾರಾಟ ಮಾಡಲು ಒಪ್ಪಿ ಒಟ್ಟು 25.000 ರೂ.ಗಳನ್ನು ಪಡೆದಿದ್ದೇವೆ ಎಂದರೆ ಸುಳ್ಳು,

ನಿಪಿ- 1 ನ್ನು ಸೃಷ್ಟಿಮಾಡಿಕೊಂಡಿದ್ದಾರೆ ಎಂದು ನಿಮಗೆ ಯಾವಾಗ ತಿಳಿಯಿತು? ಎಂದರೆ ಓಎಸ್ 112/2006 ರಲ್ಲಿನ ಪ್ರಕರಣದಲ್ಲಿ , ಕೇಸನ್ನು ಮುಗಿಸುತ್ತೇವೆ ಎಂದು ವಕೀಲರು ಸಹಿ ಪಡೆದುಕೊಂಡಿದ್ದರು ( ಸದರಿ ಪ್ರಕರಣದಲ್ಲಿ ಮೊದಲು ಹಾಜರಾಗುತ್ತಿದ್ದ ವಕೀಲರು). ಓಎಸ್ 112/2006 ರಲ್ಲಿನ ಪ್ರಕರಣದಲ್ಲಿ ನಮ್ಮ ಪರವಾಗಿ ಮೊದಲು ಹಾಜರಾಗುತ್ತಿದ್ದ ವಕೀಲರು ಯಾವ ಯಾವ ದಾಖಲೆಗಳಿಗೆ ನನ್ನ ಸಹಿ ಪಡೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನನಗೆ ಓದಲು ಬರುವುದಿಲ್ಲ ಎಂದು ನುಡಿದಿರುತ್ತಾರೆ. ಸದರಿ ನಮ್ಮ ಸಹಿಗಳನ್ನು ಓಎಸ್ 112/2006 ಚಾಲ್ತಿಯಲ್ಲಿದ್ದಾಗ ಯಾವ ಸಮಯದಲ್ಲಿ ಹಾಕಿಸಿಕೊಂಡಿದ್ದಾರೆ ಎಂದು ನನಗೆ ಹೇಳಲಾಗುವುದಿಲ್ಲ. ನನ್ನ ಮಾವ ಭೀಮಣ್ಣನು ನನಗೆ ಮೋಸ ಮಾಡುವುದಕ್ಕಾಗಿ ನಮ್ಮ ವಿರುದ್ದ ದಾವೆ ಹಾಕಿದ್ದರು. ದಾವಾ ಸ್ವತ್ತು ಪರಬಾರೆಯಾಗಬಾರದೆಂದು ದಾವಾ ಸಲ್ಲಿಸಿದ್ದರು ಎಂದರೆ ಸುಳ್ಳು.

ನಾನು ವಾದಿಯ ಹೆಸರಿನಲ್ಲಿ ದಿಃ 26-06-2006 ರಂದು ಕರಾರು ಪತ್ರ ಬರೆದುಕೊಟ್ಟಿದ್ದೆವು ಎಂದರೆ ಸುಳ್ಳು. ಸದರಿ ಪತ್ರ ಬರೆದುಕೊಟ್ಟ ಒಂದು ತಿಂಗಳಲ್ಲಿ ನನ್ನ ಮಾವ ಭೀಮಣ್ಣ ನಮ್ಮ ವಿರುದ್ದ ದಾವೆ ಸಲ್ಲಿಸಿದ್ದರು ಎಂದರೆ ಸುಳ್ಳು. ನನ್ನ ಮಾವ ನಮ್ಮ ವಿರುದ್ದ ಸಲ್ಲಿಸಿದ್ದ ದಾವೆಯಲ್ಲಿ ನಾವು ಮೊದಲಿಗೆ ನೇಮಿಸಿಕೊಂಡಿದ್ದ ವಕೀಲರು ನಮಗೆ ಮೊದಲೇ ಪರಿಚಯಸ್ಥರಲ್ಲ.

ಈ ಪ್ರಕರಣದಲ್ಲಿ ನಾನು ಎಂದು ವಕೀಲರನ್ನು ನೇಮಿಸಿಕೊಂಡಿದ್ದೇನೆ ಎಂದು ನನಗೆ ನೆನಪಿಲ್ಲ.

ಪ್ರಸ್ತುತ ನಮ್ಮನ್ನು ಪ್ರತಿನಿಧಿಸುತ್ತಿರುವ ವಕೀರನ್ನು ನಾನು ನೇಮಿಸಿಕೊಂಡಾಗ , ಈರಣ್ಣ ವಕೀಲರು ನಮ್ಮ ಸಹಿ ಪಡೆದಿದ್ದ ಕರಾರು ಪತ್ರವನ್ನು ಪ್ರಸ್ತುತ ಇರುವ ನಮ್ಮ ವಕೀಲರಿಗೆ ಕೊಟ್ಟಿದ್ದೇನೆ. ಜಮೀನಿನ ಬಗ್ಗೆ ಆಗಿರುವ ಕರಾರುಪತ್ರವನ್ನು ಕೊಟ್ಟಿದ್ದೇನೆ. ಸದರಿ ಕರಾರುಪತ್ರವನ್ನು ನನಗೆ ಓದಿ ಹೇಳಿದವರು ಯಾರೆಂದು ಹೇಳಲಾಗುವುದಿಲ್ಲ. ಈರಣ್ಣ ವಕೀಲರು ಬರೆದಿದ್ದ ಕರಾರು ಪತ್ರವನ್ನು ಪ್ರಸ್ತುತ ನಮ್ಮ ವಕೀಲರಿಗೆ ಕೊಟ್ಟಿದ್ದೇನೆ. ಸದರಿ ಈರಣ್ಣ ವಕೀಲರಿಂದ ನಾನು ತಂದು ಕೊಟ್ಟ

ಪತ್ರವನ್ನು ಪ್ರಸ್ತುತ ಇರುವ ನಮ್ಮ ವಕೀಲರು ಓದಿ ಅದು ಪ್ರಮಾಣ ಪತ್ರವೇ? ಅಥವಾ ಕರಾರುಪತ್ರವೇ? ಎಂದು ತಿಳಿಸಿದರೆ ? ಎಂದರೆ ಮೋಸ ಮಾಡಿದ್ದಾರೆ ಎಂದು ವಕೀಲರು ತಿಳಿಸಿದರು ಎಂದು ನುಡಿದಿರುತ್ತಾರೆ. ಈರಣ್ಣ ವಕೀಲರು ಕೊಟ್ಟಿದ್ದ ಪತ್ರವನ್ನು ನ್ಯಾ.ದಲ್ಲಿ ಹಾಜರುಪಡಿಸಿದ್ದೀರಾ? ಎಂದರೆ ಸಾಕ್ಷಿದಾರರು ನಮ್ಮ ವಕೀಲರ ಬಳಿ ಕೊಟ್ಟಿದ್ದೇನೆ ಎಂದು ನುಡಿದಿರುತ್ತಾರೆ. ನಿಪಿ- 1 ಕ್ಕೂ ಈರಣ್ಣ ವಕೀಲರು ಕೊಟ್ಟ ಪತ್ರಕ್ಕೂ ಸಂಬಂಧವಿಲ್ಲ ಎಂದರೆ ನಿಜ. ಸಾಕ್ಷಿಗೆ ವಕಾಲತ್ತನ್ನು ತೋರಿಸಿ ಇದರಲ್ಲಿನ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಸಾಕ್ಷಿಗೆ 2 ನೇ ಪ್ರತಿವಾದಿಯ ವಕಾಲತ್ತನ್ನು ತೋರಿಸಿದ್ದು ಸರಿಯಾಗಿ ಕಾಣಿಸುವುದಿಲ್ಲ ಎಂದು ನುಡಿದಿರುತ್ತಾರೆ. ನಿಪಿ- 1 ರ ಮೇಲಿನ ಸಹಿಗಳು ನನಗೆ ಕಾಣುವುದಿಲ್ಲ ಎಂದರೆ ನಿಜ.

ನಿಪಿ- 1 ರ ಮೇಲಿನ ಸಹಿಗಳು ನನ್ನ ಹಾಗೂ 2 ನೇ ಪ್ರತಿವಾದಿಯ ಸಹಿಗಳು ಎಂದರೆ ನನಗೆ ಕಾಣುವುದಿಲ್ಲ. ನನ್ನ ಮು.ವಿ.ಪ್ರ.ಪತ್ರವನ್ನು ತೋರಿಸಿ ಅದರಲ್ಲಿನ ಸಹಿ ಸರಿಯಾಗಿ ಕಾಣುವುದಿಲ್ಲ ಎಂದು ನುಡಿದಿರುತ್ತಾರೆ. ವಾದಿಯು ಯಾವ ಪರಿಹಾರ ಕೋರಿ ದಾವೆ ಸಲ್ಲಿಸಿದ್ದಾರೆ ಎಂದು ನಿಮ್ಮ ವಕೀಲರು ನಿಮಗೆ ತಿಳಿಸಿದ್ದಾರೆಯೇ? ಎಂದರೆ ಮೋಸ ಮಾಡಿ ಮಾಡಿರುವ ಕರಾರುಪತ್ರದ ಬಗ್ಗೆ ತಿಳಿಸಿದ್ದಾರೆ ಎಂದು ನುಡಿದಿರುತ್ತಾರೆ. ಭೀಮಣ್ಣ ಮತ್ತು ವಾದಿಯ ಗಂಡ ಸೇರಿಕೊಂಡು ಮೋಸಮಾಡಿದ್ದಾರೆ. ವಾದಿಯ ಗಂಡ ಮತ್ತು ಭೀಮಣ್ಣನ ವಿರುದ್ದ ದೂರು ಕೊಡುವಂತೆ ನಮ್ಮ ವಕೀಲರು ನನಗೆ ತಿಳಿಸಿಲ್ಲ. ನಮಗೆ ಮೋಸವಾದ ಬಗ್ಗೆ ಇಂದಿನವರೆವಿಗೂ ಯಾವುದೇ ಕಾನೂನು ಕ್ರಮ ಕೈಗೊಂಡಿಲ್ಲ ಎಂದರೆ ಕೇಸು ನಡೆಯುತ್ತಿರುವುದರಿಂದ ಏನೂ ಮಾಡಿಲ್ಲ ಎಂದು ನುಡಿದಿರುತ್ತಾರೆ. ಭೀಮಣ್ಣ ಸಲ್ಲಿಸಿದ್ದ ಕೇಸು ನಡೆಯುತ್ತಿದ್ದುದರಿಂದ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ನಿಪಿ- 1 ನ್ನು ತೋರಿಸಿದ್ದು ಇದು ಏನು ಎಂದರೆ ಇದು ಕಾಣುವುದಿಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿಗೆ ನಿಪಿ- 1 ಮತ್ತು ತನ್ನ ಮು.ವಿ.ಪ್ರ.ಪತ್ರವನ್ನು ತೋರಿಸಲಾಗಿ ಅವುಗಳು ನನಗೆ ಕಾಣುವುದಿಲ್ಲ ಎಂದು ನುಡಿದಿರುತ್ತಾರೆ. ನನ್ನ ಮು.ವಿ.ಪ್ರ.ಪತ್ರದಲ್ಲಿನ ವಿಷಯವನ್ನು ನಾನೇ ಹೇಳಿ ಬರೆಸಿದ್ದೇನೆ. ನಮ್ಮ ಮನೆ ಮಳೆಯಲ್ಲಿ ನೆನೆದು ಭೂ ಮಂಜೂರಾತಿ ಪತ್ರ ಹಾಳಾಯಿತು. ಸದರಿ ಹಕ್ಕುಪತ್ರದ ದೃಢೀಕೃತ

ಪ್ರತಿಯನ್ನು ಸಂಬಂಧಪಟ್ಟ ಇಲಾಖೆಯಿಂದ ಪಡೆಯುವಂತೆ ನಮ್ಮ ವಕೀಲರು ತಿಳಿಸಿದ್ದು , ನಾವು ಪ್ರಯತ್ನಿಸಿದರೂ ಸಹ ಅದು ಸಿಕ್ಕಿಲ್ಲ. 2 ನೇ ಪ್ರತಿವಾದಿ ವಕಾಲತ್ತು ಮೇಲೆ ಅಥವಾ ಪ್ರತಿವಾದ ಪತ್ರದ ಮೇಲೆ ಮಾಡಿರುವ ಸಹಿಗಳನ್ನು ಗುರುತಿಸಲಾಗುವುದಿಲ್ಲ. 2 ನೇ ಪ್ರತಿವಾದಿ ನಿಪಿ- 1 ಕ್ಕೆ ಸಹಿ ಮಾಡಿರುವುದು ಕಾಣುವುದಿಲ್ಲವೇ? ಎಂದರೆ ಕಾಣುವುದಿಲ್ಲ ಎಂದು ನುಡಿದಿರುತ್ತಾರೆ. ನಾನು ಮತ್ತು 2 ನೇ ಪ್ರತಿವಾದಿ ನಿಪಿ-1 ಕ್ಕೆ ಹೆಬ್ಬೆಟ್ಟಿನ ಗುರುತು ಮತ್ತು ಸಹಿಗಳನ್ನು ಶಿರಾ ತಹಶೀಲ್ದಾರ್ ಕಚೇರಿ ಬಳಿ ಮಾಡಿದ್ದೇವೆ ಎಂದರೆ ಸುಳ್ಳು. ಸದರಿ ನಿಪಿ- 1 ರ ಪತ್ರವನ್ನು ನಾವೇ ತಂದಿದ್ದೇವೆ ಎಂದರೆ ಸುಳ್ಳು. ನಿಪಿ- 1 ನ್ನು ಬರೆಯುವ ಕಾಲಕ್ಕೆ ದಾವಾ ಸ್ವತ್ತಿನ ಮಾರುಕಟ್ಟೆ ಬೆಲೆಯನ್ನು ನಾನು ಪ್ರತಿವಾದಿ 2 , ನನ್ನ ಅಳಿಯ , ನಿಪಿ- 1 ರಲ್ಲಿನ ಸಾಕ್ಷೀದಾರರು ಎಲ್ಲರೂ ಸೇರಿ ಮಾತುಕತೆ ಮೂಲಕ ನಿರ್ಧರಿಸಿದೆವು ಎಂದರೆ ಸುಳ್ಳು. ನಮ್ಮ ಕುಟುಂಬದ ತಾಪತ್ರಯಕ್ಕಾಗಿ ದಾವಾ ಆಸ್ತಿಯನ್ನು ಮಾರಾಟ ಮಾಡಲು ತೀರ್ಮಾನಿಸಿ ನಿಪಿ- 1 ನ್ನು ಬರೆದುಕೊಟ್ಟಿದ್ದೇವೆ ಎಂದರೆ ಸುಳ್ಳು. ಅದೇ ದಿನ ವಾದಿಯಿಂದ 10.000 ರೂ. ಮುಂಗಡ ಪಡೆದು ನಾನು ಮತ್ತು 2 ನೇ ಪ್ರತಿವಾದಿ ನಿಪಿ- 1 ಕ್ಕೆ ಸಹಿ ಮಾಡಿದ್ದೇವೆ ಎಂದರೆ ಸುಳ್ಳು. ದಾವಾ ಸ್ವತ್ತಿನ ಬೆಲೆ 2006 ರಲ್ಲಿ ಎಕರೆಗೆ 4 ಲಕ್ಷ ಇತ್ತು ಎಂಬ ಬಗ್ಗೆ ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ. ದಾವಾ ಸ್ವತ್ತಿನ ಇಂದಿನ ಮಾರುಕಟ್ಟೆ ಬೆಲೆ ಎಕರೆಗೆ 10 ರಿಂದ 15 ಲಕ್ಷ ಇದೆ ಎಂಬ ಬಗ್ಗೆ ನಮ್ಮ ವಕೀಲರಲ್ಲಿ ಹೇಳಿದ್ದೇನೆ , ಆದರೆ ಯಾವುದೇ ದಾಖಲೆ ಸಲ್ಲಿಸಿಲ್ಲ. ಕ್ರಯಪತ್ರ ಬರೆದುಕೊಡುವಂತೆ ವಾದಿ ನಮ್ಮನ್ನು ಕೇಳಿದರೆ ಎಂದರೆ ಸುಳ್ಳು. ಭೀಮಣ್ಣನವರು ಸಲ್ಲಿಸಿದ್ದ ಪ್ರಕರಣ ಮುಗಿದ ನಂತರ ಬರೆದುಕೊಡುತ್ತೇನೆ ಎಂದು ಒಪ್ಪಿಕೊಂಡಿದ್ದೆವು ಎಂದರೆ ಸುಳ್ಳು. ದಾವಾ ಸ್ವತ್ತನ್ನು ಬೇರೆಯವರಿಗೆ ಅತಿ ಹೆಚ್ಚು ಬೆಲೆಗೆ ಮಾರಾಟ ಮಾಡಲು ಪ್ರಯತ್ನಿಸಿದೆವು ಎಂದರೆ ನಾವು ಯಾರಿಗೂ ಮಾರಾಟ ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ. ದಾವಾ ಸ್ವತ್ತಿನ ಬಗ್ಗೆ ವಾದಿಗೆ ಕ್ರಯಪತ್ರ ಬರೆದುಕೊಡಲು ಬಾಧ್ಯಸ್ತನಿದ್ದರೂ ಅದರಿಂದ ತಪ್ಪಿಸಿಕೊಳ್ಳುವ ಸಲುವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸುಳ್ಳು.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರ್‌ಗೊಳಿಸಿ ಪ್ರಿಂಟ್ ತೆಗೆಯಲಾಯಿತು)

ಓ. ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಸಿರಾ.